ರೂ.ಕೋಟಿಗಳಲ್ಲಿ

ವರ್ಷ	ದಿನಾಂಕ	ಬಿಡುಗಡೆಯಾದ ಹಣ	ವಿನಿಯೋಗಿಸಿದ ಹಣ
2005–06	ಮಾರ್ಚ್ 2006	44.55	39.86
2006–07	26.6.2006	10.00	10.00
	10.01.2007	73.48	ಈ ಅನುದಾನವು ಇತ್ತೀಚೆಗೆ ವಿನಿಯೋಗಿಸಲಾಗುತ್ತಿದೆ.

ಉ) ಹೌದು.

ಅನುಷ್ಠಾನದ ವಿವರಗಳನ್ನು ಮೇಲಿನ (ಈ)ನಲ್ಲಿ ನೀಡಲಾದ ಉತ್ತರದಲ್ಲಿ ವಿವರಿಸಲಾಗಿದೆ.

685 (717) ಶ್ರೀ ಕೃಷ್ಣ ಪಾಲೇಮಾರ್ ಜೆ. (ಸುರತ್ಕಲ್) – ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಬಂಜರು ಭೂಮಿಯಲ್ಲಿ ಜೈವಿಕ ಇಂಧನ ಸಸ್ಯಗಳನ್ನು ಬೆಳೆಸುವ ಯೋಜನೆಯನ್ನು ಸರ್ಕಾರ ರೂಪಿಸಿದೆಯೇ, ಹಾಗಿದ್ದಲ್ಲಿ ವಿವರಗಳೇನು ;

ಆ) ಸದರಿ ಯೋಜನೆಗಾಗಿ ಎಷ್ಟು ಹಣವನ್ನು ಕಳೆದ ಎರಡು ವರ್ಷಗಳಲ್ಲಿ ವಿನಿಯೋಗಿಸಲಾಗಿದೆ ; ಜತ್ರೋಪ, 'ಹೊಂಗೆ, ಮತ್ತಿತರ ಇಂಧನ ಸಸ್ಯಗಳನ್ನು ರೈತರಿಗೆ ವಿತರಿಸುವ ಕಾರ್ಯಕ್ರಮದ ವಿವರಗಳೇನು ;;

ಇ) ಹಾಸನ ಜಿಲ್ಲೆಯಲ್ಲಿ ಜೈವಿಕ ಇಂಧನ ಪಾರ್ಕ್ ಸ್ಥಾಪನೆಯ ಕುರಿತು ಸರ್ಕಾರದ ಪ್ರಸ್ತಾವನೆಯು ಯಾವ ಹಂತದಲ್ಲಿದೆ?

ಶ್ರೀ ಬಂಡೆಪ್ಪ ಕಾಶಂಪೂರ್ (ಕೃಷಿ ಸಚಿವರು) :

ಅ) ಹೌದು. ರಾಜ್ಯದ ಎರಡು ಕೃಷಿ ವಿಶ್ವವಿದ್ಯಾನಿಲಯ ಹಾಗೂ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಪರಿಷತ್ತಿನ ಸಹಯೋಗದೊಂದಿಗೆ ಜೈವಿಕ ಇಂಧನ ಸಸಿಗಳನ್ನು ಬೆಳೆಸಿ ಅದನ್ನು ರೈತರಿಗೆ ವಿತರಿಸಲಾಗುತ್ತಿದೆ.

ಆ) ಕಳೆದ 2 ವರ್ಷಗಳಲ್ಲಿ ರೂ.325.00 ಲಕ್ಷಗಳನ್ನು ವಿನಿಯೋಗಿಸ ಲಾಗಿದೆ.

1. ಜತ್ರೋಪ, ಹೊಂಗೆ, ಬೇವು ಮತ್ತು ಹಿಪ್ಪೆ ಸಸಿಗಳನ್ನು ಬೆಳೆಸಿ ರೈತರಿಗೆ ವ್ಯವಸಾಯಕ್ಕೆ ಯೋಗ್ಯವಲ್ಲದ / ಬಂಜರು ಭೂಮಿ ಹಾಗೂ ಬದುಗಳ ಮೇಲೆ ಬೆಳೆಸಲು ಉಚಿತವಾಗಿ ವಿತರಿಸುವುದು.

2. ಹೊಂಗೆ, ಬೇವು, ಹಿಪ್ಪೆ ಮತ್ತು ಸಿಮರೋಬ ಸಸಿಗಳನ್ನು ಕಸಿ ಕಟ್ಟುವುದು ಹಾಗೂ ಕಸಿಕಟ್ಟಿದ ಸಸಿಗಳನ್ನು ರೈತರಿಗೆ / ಇಲಾಖಾ ಕೃಷಿ ಕ್ಷೇತ್ರಗಳಿಗೆ ಉಚಿತವಾಗಿ ವಿತರಿಸುವುದು.

ಇ) ಹಾಸನ ಜಿಲ್ಲೆ ಕೃಷಿ ಕಾಲೇಜಿನ ಮೂಲಕ ಹಾಸನ ಜಿಲ್ಲೆಯಲ್ಲಿ ಜೈವಿಕ ಇಂಧನ ಪಾರ್ಕ್ ಒಂದನ್ನು ಸ್ಥಾಪಿಸಲು ಸರ್ಕಾರವು 20.1.2007 ರಂದು ಮಂಜೂರಾತಿ ನೀಡಿದೆ.

686 (718) ಶ್ರೀ ಕೃಷ್ಣ ಪಾಲೇಮಾರ್ ಜೆ. (ಸುರತ್ಕಲ್) – ಮಾನ್ಯ ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮತ್ಸ್ಯಾಶ್ರಯ ಯೋಜನೆಯಡಿಯಲ್ಲಿ 2005-06 ಮತ್ತು 2006-07ನೇ ಸಾಲಿನಲ್ಲಿ ಎಷ್ಟು ಮನೆಗಳನ್ನು ನಿರ್ಮಿಸಿ ಫಲಾನುಭವಿಗಳಿಗೆ ವಿತರಿಸಲಾಗಿದೆ ; (ಕರಾವಳಿ ಜಿಲ್ಲೆಯ ತಾಲ್ಲೂಕುವಾರು ವಿವರ ನೀಡುವುದು) ;

ಆ) ಮತ್ಸ್ಯ ಮಹಿಳಾ ಸ್ವಾವಲಂಬನೆ ಯೋಜನೆಗಾಗಿ ಸರ್ಕಾರ ಬಿಡುಗಡೆ ಮಾಡಿದ ಅನುದಾನದ ಮೊತ್ತ ಎಷ್ಟು; ಎಷ್ಟು ಜನ ಫಲಾನುಭವಿಗಳಿಗೆ ಯೋಜನೆಯ ಸೌಲಭ್ಯವನ್ನು ನೀಡಲಾಗಿದೆ ?

ಶ್ರೀ ಬಿ. ನಾಗರಾಜಶೆಟ್ಟಿ (ಮೀನುಗಾರಿಕೆ ಮತ್ತು ಮುಜರಾಯಿ ಸಚಿವರು) :

ಅ) ಮತ್ಸ್ಯಾಶ್ರಯ 1 ಮತ್ತು 2ನೇ ಹಂತದ ಯೋಜನೆಯಡಿಯಲ್ಲಿ ಕರಾವಳಿ ಜಿಲ್ಲೆಗಳಲ್ಲಿ 2005-06 ರಿಂದ ಒಟ್ಟು 462 ಮನೆಗಳನ್ನು ನಿರ್ಮಿಸಿ ಫಲಾನುಭವಿಗಳಿಗೆ ನೀಡಲಾಗಿದೆ. ತಾಲ್ಲೂಕುವಾರು ವಿವರ ಕೆಳಕಂಡಂತಿದೆ.

ಕ್ರಮ ಸಂಖ್ಯೆ	ತಾಲ್ಲೂಕು	2005-06
1	ಮಂಗಳೂರು	36
2	ಉಡುಪಿ	163
3	ಕುಂದಾಪುರ	100